ದಿಃ 07-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಎಸ್.ವಿ ಪ್ರತಿವಾದಿ ಪರ ವಕೀಲರಿಂದಃ

ನಾನು ದ್ವಿತೀಯ ಪಿ.ಯು.ಸಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ವಾದಿಯು ನನ್ನ ತಾಯಿ. ಈ ದಾವೆಯ ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಅಂಶಗಳನ್ನು ಬರೆಯಲು ನನ್ನ ತಂದೆಯವರು ಮಾಹಿತಿಗಳನ್ನು ನೀಡಿದರು. ಸರ್ವೆ ನಂ.50 ರ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ. 58 ರ ಚೆಕ್ಕುಬಂದಿ ಪೂ-ಕುರುಬರಹಳ್ಳಿಯವರ ಜಮೀನು, ಪ-ರಸ್ತೆ, ಉ-ಹೊಸ ನ್ಯಾಯಾಲಯದ ಜಾಗ ಹಾಗೂ ದ-ಸತೀಶ್ ಕುಮಾರ್ ರವರ ಜಮೀನು. ಸರ್ವೆ ನಂ. 50 ಮತ್ತು ಸರ್ವೆ ನಂ. 58 ರ ಜಮೀನುಗಳಿಗೆ ಪ್ರತ್ಯೇಕವಾದ ಚೆಕ್ಕುಬಂದಿಗಳಿವೆ ಎಂದರೆ ಸಾಕ್ಷಿ ಆ ಎರಡೂ ಸರ್ವೆ ನಂಬರ್ ಗಳು ಒಂದೇ ಆಗಿರುತ್ತದೆ ಆದರೆ ಕಣ್ಣತಪ್ಪಿನಿಂದ ನನ್ನ ತಂದೆಯವರು ಸರ್ವೆ ನಂಬರ್ ಅನ್ನು 50 ಎಂದು ಬರೆಸಿದರು ಎಂದು ನುಡಿಯುತ್ತಾರೆ. ಸರ್ವೆ ನಂ. 50 ಮತ್ತು 58 ರ ಜಮೀನುಗಳು ಒಂದೇ ಎಂದು ತೋರಿಸಲು ಉಪನೋಂದಣಾಧಿಕಾರಿಗಳ ಕಛೇರಿಯಿಂದ ನೀಡಿರುವ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಸರ್ವೆ ನಂ. 50 ರ ವಿಸ್ತೀರ್ಣ 1 ಎಕರೆ 20 ಗುಂಟೆ. ಸಾಕ್ಷಿಯು ಮುಂದುವರೆದು ಸರ್ವೆ ನಂ. 50 ಮತ್ತು 58 ಒಂದೇ ಆಗಿದ್ದು ಅದರ ವಿಸ್ತೀರ್ಣವು ಒಂದೇ ಆಗಿದೆ ಎಂದು ನುಡಿಯುತ್ತಾರೆ.

ನಾವು ಸರ್ವೆ ನಂಬರ್ 58 ನ್ನು ಖರೀದಿಸಿದೆವು ಆದರೆ ಕಣ್ಣತಪ್ಪಿನಿಂದ ಸರ್ವೆ ನಂ. 50 ಎಂದು ಬರೆಯಲಾಯಿತು. ಸದರಿ ಜಮೀನನ್ನು ದಿನಾಂಕ 11.05.1964 ರಂದು ನನ್ನ ತಂದೆಯವರು ಖರೀದಿಸಿದರು. ಸರ್ವೆ ನಂ. 58 ರ ಬದಲು ಸರ್ವೆ ನಂ. 50 ಎಂದು ಬರೆಯಲಾಗಿದೆ ಎಂಬ ವಿಚಾರವು ನನಗೆ 2018 ರಲ್ಲಿ ತಿಳಿಯಿತು. ಸದರಿ ಜಮೀನನ್ನು ಖರೀದಿಸಿದ ನಂತರ ನನ್ನ ತಂದೆಯವರ ಹೆಸರಿಗೆ ಖಾತೆ ಅಥವಾ ಪಹಣಿಯು ಬಂದಿರುವುದಿಲ್ಲ. ವೆಂಕಟೇಗೌಡ ಮತ್ತು ನಂಜೇಗೌಡ ಎಂಬುವವರು 37 ಗುಂಟೆ ಹಾಗೂ ಸತ್ಯಪ್ಪ ಮತ್ತು ಕದೀರಪ್ಪ ಎಂಬುವವರು 23 ಗುಂಟೆಯನ್ನು ನನ್ನ ತಂದೆಯವರಿಗೆ ಮಾರಿದರು. ಸದರಿ ಜಮೀನನ್ನು ಮಾರಾಟ ಮಾಡುವ ಸಮಯದಲ್ಲಿ ಮಾರಾಟಗಾರರ ಹೆಸರಿನಲ್ಲಿ ಖಾತೆ ಮತ್ತು ಪಹಣಿಗಳು ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಜಮೀನುಗಳು ಮಾರಾಟಗಾರರಿಗೆ ಹೇಗೆ ಬಂದಿತು ಎಂಬ ಪ್ರಶ್ನೆಗೆ ಸಾಕ್ಷಿ ಅವುಗಳು ಸರ್ಕಾರದಿಂದ ಮಾರಾಟಗಾರರಿಗೆ ಮಂಜೂರಾದವು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸರ್ಕಾರದಿಂದ ಜಮೀನು ಮಂಜೂರಾದಾಗ ಅದಕ್ಕೆ ಸಂಬಂಧಪಟ್ಟಂತೆ ಒಂದು ಮಂಜೂರಾತಿ ಪತ್ರವನ್ನು ಸರ್ಕಾರವು ನೀಡುತ್ತದೆ ಎಂದರೆ ಸರಿ. ಸದರಿ ಜಮೀನುಗಳು ಮಾರಾಟಗಾರರಿಗೆ ಯಾವ ಇಸವಿಯಲ್ಲಿ ಮಂಜೂರಾದವು ಎಂಬುದು ನನಗೆ

ಗೊತ್ತಿಲ್ಲ. ಸಾಮಾನ್ಯವಾಗಿ ಕೆಲವು ವರ್ಷಗಳ ಕಾಲ ಮಂಜೂರಾದ ಜಮೀನನ್ನು ಮಾರಾಟ ಮಾಡಬಾರದು ಎಂಬ ಷರತ್ತನ್ನು ಮಂಜೂರಾತಿ ಪತ್ರದಲ್ಲಿ ವಿಧಿಸಲಾಗಿರುತ್ತದೆ ಎಂದರೆ ಸಾಕ್ಷಿ ಸದರಿ ಷರತ್ತಿನ ಸಮಯವು ಪೂರ್ಣಗೊಂಡಿತ್ತು ಎಂದು ನುಡಿಯುತ್ತಾರೆ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವಿರಾ? ಎಂಬ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆಗಳನ್ನು ನನ್ನ ವಕೀಲರಿಗೆ ನೀಡಿದೆನು ಎಂದು ನುಡಿಯುತ್ತಾರೆ.

ಗೌರಿಬಿದನೂರಿನಲ್ಲಿರುವ ನ್ಯಾಯಾಲಯದ ಕಟ್ಟಡಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಮತ್ತು ಕರ್ತವ್ಯ ಇದೆ ನ್ಯಾಯಾಲಯಕ್ಕಿದೆ ಎಂದರೆ ಸರಿ. ಗೌರಿಬಿದನೂರಿನಲ್ಲಿ ಹೊಸ ನ್ಯಾಯಾಲಯದ ಕಟ್ಟಡವನ್ನು ಕಟ್ಟಬೇಕೆಂದು ಸರ್ವೆ ನಂ.58 ನ್ನು ಗುರುತಿಸಲಾಗಿತ್ತು ಎಂದರೆ ಸಾಕ್ಷಿ ನ್ಯಾಯಾಲಯದ ಕಟ್ಟಡವನ್ನು ದಾವಾ ಆಸ್ತಿಯ ಪಕ್ಕದಲ್ಲಿ ಕಟ್ಟಬೇಕೆಂದು ಪಕ್ಕದ ಆಸ್ತಿಯನ್ನು ಗುರುತಿಸಲಾಗಿತ್ತು ಎಂದು ನುಡಿಯುತ್ತಾರೆ. (ಈ ಪ್ರಶ್ನೆಗೂ ದಾವಾ ಆಸ್ತಿಗೂ ಸಂಬಂಧವಿಲ್ಲವೆಂದು ವಾದಿ ಪರ ವಕೀಲರು ಮೌಖಿಕ ತಕರಾರನ್ನು ಸಲ್ಲಿಸಿರುತ್ತಾರೆ). ನ್ಯಾಯಾಲಯದ ಹೊಸ ಕಟ್ಟಡವನ್ನು ಕಟ್ಟಬೇಕೆಂದು ಗುರುತಿಸಿರುವ ಜಮೀನಿನ ಪಕ್ಕದ ಜಮೀನು ನಮ್ಮ ಜಮೀನಾಗಿರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

P.M Sachin
Digitally signed by P.M Sachin
Date: 2025.02.10 16:02:02 +0530

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು